**<u>ದಿನಾಂಕಃ 14-07-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಎಂ.ಹೆಚ್.ಕೆ. ವಕೀಲರಿಂದಃ</u>**

ನಾನು ಪದವಿದರ. ನನ್ನ ಜನ್ಮ ದಿನಾಂಕಃ 01.08.1986. ನನ್ನ ಅಜ್ಜ ಮರಿಯಪ್ಪ ಮುದಕಪ್ಪ ಮಾಳಗಿರವರು ದಿನಾಂಕಃ 01.04.1998 ರಂದು ತೀರಿಕೊಂಡಿರುತ್ತಾರೆ. ನನ್ನ ಅಜ್ಜ ತೀರಿಕೊಂಡಾಗ ನನಗೆ 9 ವರ್ಷ ವಯಸ್ಸಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 12 ವರ್ಷ ವಯಸ್ಸಿನವನು ಇದ್ದೆ ಎನ್ನುತ್ತಾರೆ. ನನ್ನ ಅಜ್ಜ ತೀರಿಕೊಂಡು 27 ವರ್ಷಗಳು ಕಳೆದಿವೆ ಎಂದರೆ ಸರಿ. ನನಗೆ ಈಗ 36 ವರ್ಷ ಎಂದರೆ ಸಾಕ್ಷಿ 37 ವರ್ಷ ಎನ್ನುತ್ತಾರೆ. ನನ್ನ ಅಜ್ಜ ತೀರಿಕೊಂಡು ಆಗಿರುವ ವಯಸ್ಸಿಗೆ ನನ್ನ ವಯಸ್ಸು ಕಳೆದರೆ ನನಗೆ ನನ್ನ ಅಜ್ಜ ತೀರಿಕೊಂಡಾಗ ನನಗೆ 9 ವರ್ಷ ಇತ್ತು ಎಂದು ಗೊತ್ತಾಗುತ್ತದೆ ಎಂದರೆ ಸರಿಯಲ್ಲ. ನಿಡಿ-33 ರ ಮೇಲೆ ಎಂ.ಎಂ.ಮಾಳಗಿ, ಮಾಜಿ ಶಾಸಕರು ಬ್ಯಾಡಗಿ ಎಂದು ಬರೆದಿದ್ದನ್ನು ನೋಡಿ ಅದರ ಮೇಲಿರುವ ಸಹಿಯನ್ನು ನನ್ನ ಅಜ್ಜನ ಸಹಿ ಎಂದು ನಾನು ಗುರುತಿಸಿ ಹೇಳುತ್ತಿದ್ದೇನೆ ಎಂದರೆ ಸರಿ.

02. ಮೂಲತಃ ನಮ್ಮ ಮನೆತನ ರಾಜಕೀಯವಾಗಿ ಸಕ್ರೀಯವಾಗಿರುವ ಮನೆತನ ಎಂದರೆ ಸರಿ. ನನ್ನ ತಂದೆ ಸಹ ರಾಜಕೀಯದಲ್ಲಿ ಸಕ್ರೀಯವಾಗಿದ್ದರು ಎಂದರೆ ಸರಿ. ನನ್ನ ಸಹೋದರ ಸಹ ಬ್ಯಾಡಗಿ ಮುನ್ಸಿಪಾಲಟಿಯ ಕೌನ್ಸಿಲರ್ ಹಾಗೂ ಉಪಾಧ್ಯಕ್ಷರು ಎಂದರೆ ಸರಿ. ನಾನು ಸಹ ಬಿ.ಜೆ.ಪಿ ರಾಜಕೀಯ ಪಕ್ಷದ ಕಾರ್ಯಕರ್ತನಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ ಎಂದರೆ ಸರಿ. ನನಗೆ ತಿಳುವಳಿಕೆ ಬರುವವರೆಗೂ ನನ್ನ ಅಜ್ಜನ ಸಹಿಯನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಆಗಾಗ ಅಜ್ಜನನ್ನು ಬ್ಯಾಂಕಿಗೆ ಕರೆದುಕೊಂಡು ಹೋದಾಗ ಅವರ ಸಹಿಯನ್ನು ನೋಡಿರುತ್ತೇನೆ ಎನ್ನುತ್ತಾರೆ. ನಾನು ನನ್ನ ಅಜ್ಜ ಸಹಿ ಮಾಡಿದ್ದನ್ನು ಯಾವತ್ತೂ ಸಹ ನೋಡದೇ ಇದ್ದರೂ ಸಹ ನೋಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಜ್ಜ ನನ್ನ ಎದುರಿಗೆ ನಿಡಿ-33 ರಲ್ಲಿ ಮಾಡಿರುವ ಸಹಿ ರೀತಿಯ ಸಹಿಯನ್ನು ಹೊಂದಿರುವ ದಾಖಲೆಗಳನ್ನು ಹಾಜರು ಮಾಡಲು ನನಗೆ ತೊಂದರೆ ಇಲ್ಲ ಎಂದರೆ ಸಾಕ್ಷಿ ಅಂತಹ ದಾಖಲೆಗಳು ನಮ್ಮ ಬಳಿ ಇಲ್ಲ ಎನ್ನುತ್ತಾರೆ. ಪ್ರತಿವಾದಿಗಳಿಗೆ ಅನುಕೂಲ ಮಾಡುವ ನಿಟ್ಟಿನಲ್ಲಿ ಸದರಿ ನಿಡಿ-33 ರ ಮೇಲಿರುವ ನಿಡಿ-33 ಎ ಸಹಿ ನನ್ನ ಅಜ್ಜನ ಸಹಿ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).**

ಓ.ಹೇ.ಕೆ.ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.